e-mail: registrar@uni-mysore.ac.in
www.uni-mysore.ac.in

ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು-570 005

ಸಂಖ್ಯೆ:ಪಿಆರ್ 13/02/2023-24

ದಿನಾಂಕ 21.10.2025

ಸುತ್ತೋಲೆ

ವಿಷಯ: ಇ-ಆಡಳಿತ ಕೇಂದ್ರವು ಅಭಿವೃದ್ಧಿಪಡಿಸಿರುವ "ಕರ್ತವ್ಯ" -ಕರ್ನಾಟಕ ಆಧುನಿಕ ಹಾಜರಾತಿ ನಿರ್ವಹಣಾ ವ್ಯವಸ್ಥೆ ಮತ್ತು ಕೃತಕ ಬುದ್ಧಿ ಮತ್ತೆ/ ಮೆಷಿನ್ ಲರ್ನಿಂಗ್ ಯೋಜನೆಗಳಿಗೆ ಲಾಂಛನ ವಿನ್ಯಾಸಗೊಳಿಸುವ ಸ್ಪರ್ಧೆಯಲ್ಲಿ ಭಾಗವಹಿಸುವ ಬಗ್ಗೆ

ಉಲ್ಲೇಖ: ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಇ-ಆಡಳಿತ ಕೇಂದ್ರ ಬೆಂಗಳೂರು ಇವರ ಪತ್ರ ಸಂಖ್ಯೆ:CEG-AIML0ADMN/5/2024-MAKA ದಿನಾಂಕ:15.10.2025

****

ಕರ್ನಾಟಕ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ (ಇ-ಆಡಳಿತ)ಇಲಾಖೆಯ ಇ-ಆಡಳಿತ ಕೇಂದ್ರವು ಕೃತಕ ಬುದ್ಧಿಮತ್ತೆ(AI) ಹಾಗೂ ಭೌಗೋಳಿಕ ಮಾಹಿತಿ ವ್ಯವಸ್ಥೆಯಂತಹ (GIS)ಅತ್ಯಾಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಂಡು ಎಲ್ಲಾ ಇಲಾಖೆಗಳಲ್ಲಿ ಸುಧಾರಿತ ಕರ್ನಾಟಕ ಆಧುನಿಕ ಹಾಜರಾತಿ ನಿರ್ವಹಣಾ ವ್ಯವಸ್ಥೆ(ಮೊಬೈಲ್ ಆಧಾರಿತ ಅಪ್ಲಿಕೇಶನ್)(Karnataka Advanced Attendance Management System)ಮತ್ತು ಆಡಳಿತಾತ್ಮಕ ಕಾರ್ಯವಿಧಾನಗಳನ್ನು ವೇಗಗೊಳಿಸಲು ಮತ್ತು ನಾಗರಿಕ ಆಧಾರಿತ ಸೇವೆಗಳನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಇ-ಆಡಳಿತ ಕೇಂದ್ರವು ಅಭಿವೃದ್ಧಿಪಡಿಸಿರುವ "ಕರ್ತವ್ಯ" -ಕರ್ನಾಟಕ ಆಧುನಿಕ ಹಾಜರಾತಿ ವ್ಯವಸ್ಥೆಯನ್ನು ಜಾರಿಗೊಳಿಸಲಾಗುತ್ತಿದೆ.

ಹಾಗೂ ತತ್ಸಂಬಂಧ ಸರ್ಕಾರದ ಎಲ್ಲಾ ಸಿಬ್ಬಂದಿಗಳಿಗೆ ವರ್ಧಿಸಲು ಸರ್ಕಾರವು ತೀರ್ಮಾನಿಸಲಾಗಿರುತ್ತದೆ. ಪ್ರಸ್ತುತ ಈ ಎರಡು ತಂತ್ರಾಂಶಗಳಿಗೆ ಹೊಂದಿಕೆಯಾಗುವ ವಿಶಿಷ್ಟ ಮತ್ತು ಸೃಜನಾತ್ಮಕ ಲೋಗೋವನ್ನು ವಿನ್ಯಾಸಗೊಳಿಸುವ ಸಂಬಂಧ ಮೈಸೂರು ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಟ್ಟ ಸ್ನಾತಕೋತ್ತರ ವಿಭಾಗಗಳಲ್ಲಿ/ಘಟಕ ಕಾಲೇಜುಗಳಲ್ಲಿ/ಸರ್ಕಾರದಿಂದ ಗುರುತಿಸಲ್ಪಟ್ಟ ವಿವಿಧ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಲಾಂಛನ ವಿನ್ಯಾಸ ಸ್ಪರ್ಧೆಯನ್ನು ಆಯೋಜಿಸಲಾಗಿರುತ್ತದೆ, ಮತ್ತು ವಿಜೇತರ ಲಾಂಛನವನ್ನು ಅಧಿಕೃತವಾಗಿ ತಂತ್ರಾಂಶದ ಲಾಂಛನ ಚಿತ್ರವನ್ನಾಗಿ ಉಪಯೋಗಿಸಲಾಗುವುದು ಹಾಗೂ ವಿಜೇತರಾದವರಿಗೆ ಈ ಆಡಳಿತದ ಕೇಂದ್ರದ-ವತಿಯಿಂದ ಪ್ರತಿ ಲಾಂಛನಕ್ಕೆ ಕೃತಕ ಬುದ್ಧಿಮತ್ತೆ ಮತ್ತು ಕೆಎಎಎಂಎಸ್ ವತಿಯಿಂದ ರೂ.50,000/-(ಐವತ್ತು ಸಾವಿರ ರೂಪಾಯಿ)ಗಳು ಹಾಗೂ ದೃಢೀಕರಣ ಪತ್ರ ನೀಡಲಾಗುವುದು.

.ಈ ಮೇಲಿನ ಸ್ಪರ್ಧೆಗೆ ಭಾಗವಹಿಸಲು ಹತ್ತನೇ ತರಗತಿಯಲ್ಲಿ ಉತ್ತೀರ್ಣರಾಗಿ ಪ್ರಸ್ತುತ ಉನ್ನತ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಈ ವೆಬ್‌ಸೈಟ್‌ನಲ್ಲಿ https/ kartavya. karanataka. gov. in/ logocontest/ ನೊಂದಾಯಿಸಬಹುದಾಗಿದೆ.

ಸ್ಪರ್ಧೆಯ ವಿವರಗಳು:

ಸ್ಪರ್ಧೆ: ಲಾಂಛನ ವಿನ್ಯಾಸ
ಆಯೋಜನೆ: ಇ-ಆಡಳಿತ ಕೇಂದ್ರ
ಸ್ಪರ್ಧೆ ಪ್ರಾರಂಭ ದಿನಾಂಕ:19.10.2025
ಸ್ಪರ್ಧೆ ಅಂತಿಮ ದಿನಾಂಕ:09.11.2025

ಸ್ಪರ್ಧೆ ಅರ್ಹತೆಗಳು: ಭಾಗವಹಿಸುವ ವಿದ್ಯಾರ್ಥಿಗಳು ಹತ್ತನೇ ತರಗತಿಯಲ್ಲಿ ಉತ್ತೀರ್ಣರಾಗಿ ಪ್ರಸ್ತುತ ಉನ್ನತ ವ್ಯಾಸಂಗ ಮಾಡುತ್ತಿರಬೇಕು.

ವಿದ್ಯಾರ್ಥಿಗಳು ವಿನ್ಯಾಸಗೊಳಿಸಿರುವ ಲಾಂಛನವನ್ನು ಕಡ್ಡಾಯವಾಗಿ ಕರ್ತವ್ಯ ಪೋರ್ಟಲ್ ಮೂಲಕ ಸಲ್ಲಿಸಬೇಕಾಗಿರುತ್ತದೆ ಮತ್ತು ಈ ಕುರಿತು ಹೆಚ್ಚಿನ ಮಾಹಿತಿಗಾಗಿ ಯೋಜನಾ ನಿರ್ದೇಶಕರು, KAAMS ಯೋಜನೆ(ಇ-ಮೇಲ್:contest-ceg@karnataka.gov.in)ರವರನ್ನು ಸಂಪರ್ಕಿಸಬಹುದು.

ನಿಯಮ ಮತ್ತು ಮಾರ್ಗಸೂಚಿಗಳು ಮೈಸೂರು ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಲಭ್ಯವಾಗಿರುತ್ತದೆ.

ಕುಲಸಚಿವರು
ಕುಲಸಚಿವರು 24/10/25
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು-570 005

ಗೆ,

1. ಎಲ್ಲಾ ಸ್ನಾತಕ/ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರುಗಳು/ನಿರ್ದೇಶಕರು/ಸಂಯೋಜನಾಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

Hr. Karthik
to attend
24/10/2025